ಪಿ. ಡಬ್ಲ್ಯೂ: 1

( ಇಂದು ದಿ: 31 /07/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 3 ವರ್ಷಗಳಿಂದ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. 2019 ರಲ್ಲಿ ಆರೋಪಿ ಪಿರ್ಯಾದಿ ಸಂಸ್ಥೆಯಲ್ಲಿ ಸಾಲ ಪಡೆದಿರುತ್ತಾನೆ. ಆಗ ನಾನು ಮ್ಯಾನೇಜರ್ ಆಗಿರಲಿಲ್ಲ. ಆರೋಪಿತನು ಸಾಲದ ಅರ್ಜಿಯನ್ನು ನನ್ನ ಸಮಕ್ಷಮ ನೀಡಿಲ್ಲ. ಪಿರ್ಯಾದಿ ಸಂಸ್ಥೆಯಲ್ಲಿ ನಿರ್ದೇಶಕರ ಮಂಡಳಿಯ ಮೇರೆಗೆ ನಡೆಯುವ ಸಂಸ್ಥೆಯಾಗಿದೆ. ನಿರ್ದೇಶಕರ ಮಂಡಳಿಯಲ್ಲಿ ನನಗೆ ಅಧಿಕಾರ ಪತ್ರವನ್ನು ನೀಡಲಾಗುತ್ತದೆ. ಠರಾವಿನಲ್ಲಿ ನನ್ನ ಹೆಸರನ್ನು ಬರೆದಿರುತ್ತಾರೆ. ಸದರಿ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-1 ನಮ್ಮ ಜನರಲ್ ಮ್ಯಾನೇಜರ್ ಸಹಿ ಮಾಡಿರುವ ದಾಖಲೆಯಾಗಿದೆ. ಆರೋಪಿಗೆ ಸಾಲ ನೀಡುವ ಬಗ್ಗೆ ಸಾಲದ ಅರ್ಜಿ ಇದೆ. ನಿರ್ದೇಶಕ ಮಂಡಳಿಯಲ್ಲಿ ಸಾಲದ ಅರ್ಜಿಯು ಪಾಸ್ ಆಗಿರುತ್ತದೆ. ನಿರ್ದೇಶದ ಮಂಡಳಿಯಲ್ಲಿ ಸಾಲದ ಅರ್ಜಿ ಪಾಸಾಗಿರುವ ಬಗ್ಗೆ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು. ಸಾಲದ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅರೋಪಿತನಿಗೆ ಸಾಲ ನೀಡಿರುವ ಕುರಿತು ರಶೀದಿಯನ್ನು ಪಡೆದಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಗೆ ನಾನೇ ನೀಡಿರುತ್ತೇನೆ. ಆರೋಪಿತನು ಈ ಮೊದಲ ನಮ್ಮ ಸಂಸ್ಥೆಯಲ್ಲಿ ಸಾಲ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿತನಿಗೆ ಗೃಹ ಬಳಕೆ ವಸ್ತುಗಳ ಖರೀದಿಗಾಗಿ ಸಾಲ ನೀಡಿರುತ್ತೇವೆ. ಆರೋಪಿಯಿಂದ ನಾವು ಕ್ವಾಟೇಶನ್ ಪಡೆಯಲಿಲ್ಲ ಇದನ್ನು ಪಡೆಯಲು ನಮಗೆ ತೊಂದರೆ ಇರಲಿಲ್ಲ. ಆರೋಪಿತನಿಗೆ ನಗದಾಗಿ ಸಾಲ ನೀಡಿದ್ದೇವೆ ಆದರೆ ಗೃಹಬಳಕೆ ಸಾಲವನ್ನಾಗಿ ನಮೂದಿಸಿರುತ್ತೇವೆ. ನಾನು ಅಧಿಕಾರವನ್ನು ಪಡೆಯುವ ಮೊದಲು ಆರೋಪಿತನು ಎಷ್ಟು ಹಣ ತುಂಬಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿತನು ಚೆಕ್ಕನ್ನು ನನ್ನ ಹತ್ತಿರ ಕೊಟ್ಟಿರುತ್ತಾರೆ. ಸದರಿ ಚೆಕ್ಕನ್ನು ಪಡೆಯುವಾಗ ನನಗೆ ಚೆಕ್ಕಿನ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು. ಆರೋಪಿತನು ನನಗೆ ಸಿಂಡಿಕೇಟ ಬ್ಯಾಂಕ್ ನ ಚೆಕ್ಕನ್ನು ನೀಡಿದ್ದಾರೆ. ನಾನು ಹೇಳುವ ದಿನಾಂಕದಂದು ಸಿಂಡಿಕೇಟ್ ಬ್ಯಾಂಕ್ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿ. ನಮ್ಮ ಸಂಸ್ಥೆಯಲ್ಲಿ ಹಣ ತುಂಬಿದರೆ ಮತ್ತು ಹಣ ತೆಗೆದರೆ ಸ್ಲಿಪ್ ಅನ್ನು ನೀಡುತ್ತೇವೆ. ಅದೇ ರೀತಿ ಚೆಕ್ಕನ್ನು ನಮ್ಮ ಸಂಸ್ಥೆಗೆ ನೀಡಿದಾಗ ನಾವು ಸ್ಲಿಪ್ ಗೆ ಸೀಲು ಹಾಕಿ ನೀಡುತ್ತೇವೆ ಎಂದರೆ ಸರಿಯಲ್ಲ. ಚೆಕ್ಕನ್ನು ನೀಡಿದರೆ ನಾವು ಯಾವುದೇ ರಶೀದಿ ನೀಡುವುದಿಲ್ಲ.

**ಪಿ. ಡಬ್ಲ್ಯೂಃ 1**

ಆರೋಪಿಯು ರೂ . 50,000 ಸಾಲದ ಮೊತ್ತ ಸಂಪೂರ್ಣವಾಗಿ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ದೆಯಲ್ಲಿ ಈ ಮೊದಲು ಒಂದು ಸಾಲ ಪಡೆದಿದ್ದು ಅದರ ಭದ್ರತೆಗಾಗಿ ಸದರಿ ಪ್ರಕರಣದ ಚೆಕ್ಕನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಲ ಮರುಪಾವತಿ ಮಾಡಿದಾಗ ಚೆಕ್ಕನ್ನು ಆರೋಪಿ ಮರಳಿ ಕೇಳಿದಾಗ ನಾವು ವಾಪಸ್ಸು ನೀಡಿಲ್ಲ. ಚೆಕ್ಕಿನ ಮೇಲೆ ನಮ್ಮ ಸಿಬ್ಬಂದಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಇಂಗ್ಲೀಷ ಬರೆಯಲು ಬರುವುದಿಲ್ಲ ಎಂದರೆ ಬೇರೆಯವರು ಬರೆದಿರಬಹುದು ಎಂದು ಉತ್ತರಿಸಿರುತ್ತಾರೆ. ಚೆಕ್ಕಿನ ಮೇಲೆ ಇರುವ ಮತ್ತು ಸಹಿಯಲ್ಲಿರುವ ಶಾಹಿಯ ವ್ಯತ್ಯಾಸ ಇದೆ ಎಂದರೆ ಬರಹವು ಬೇರೆಯವರು ಬರೆದಿರಬಹುದು ಎಂದು ಉತ್ತರಿಸಿರತಾತ್ರೆ. ಭದ್ರತೆಗಾಗಿ ಪಡೆದಿರುವ ಚೆಕ್ಕನ್ನು ದುರುಪಯೋಗಪಡಿಸಿ ಸುಳ್ಳು ಪ್ರಕರಣದ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತನು ನಮಗೆ ಸಾಲದ ಅರ್ಜಿ, ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಅದಕ್ಕೆ ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಾಲ ನೀಡಿರುವುದಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**